# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 669(798) |
| ಸದಸ್ಯರ ಹೆಸರು | : | ಶ್ರೀ ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | : | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 10.03.2026 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಳೆದ 2024-25ನೇ ಸಾಲಿಗೆ ಸಂಬಂಧಿಸಿದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆ ಅಡಿ ರೈತರಿಗೆ ವಿಮಾ ಪರಿಹಾರ ಮೊತ್ತ ಪಾವತಿಸುವ ಸಂದರ್ಭದಲ್ಲಿ ಅನ್ಯಾಯವಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ: | ರಾಜ್ಯದಲ್ಲಿ ಕಳೆದ 2024-25ನೇ ಸಾಲಿನಲ್ಲಿ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆ ಅಡಿ ಅರ್ಹ ರೈತರಿಗೆ ವಿಮಾ ಪರಿಹಾರ ಮೊತ್ತವನ್ನು ಯೋಜನೆ ಮಾರ್ಗಸೂಚಿಗಳನ್ವಯ ಪಾವತಿಸಲಾಗಿದೆ.<br><br>ಕೆಲವು ಪ್ರಕರಣಗಳಲ್ಲಿ ಬೆಳೆ ವ್ಯತ್ಯಯ, ಬ್ಯಾಂಕ್ ಖಾತೆಗಳು ಸರಿಯಿರದಿರುವ ಕಾರಣ/ ಬ್ಯಾಂಕ್ ಖಾತೆ ಸಂಬಂಧಿತ ವ್ಯತ್ಯಾಸಗಳಿಂದಾಗಿ ರೈತರ ಖಾತೆಗೆ ವಿಮಾ ಪರಿಹಾರ ಮೊತ್ತ ಜಮೆಯಾಗಿರುವುದಿಲ್ಲ. ಈ ಬಗ್ಗೆ ರೈತರಿಗೆ ತಿಳಿಸಲಾಗಿದೆ ಮತ್ತು ಆಗಿಂದ್ದಾಗ್ಗೆ ಸರಿಪಡಿಸಿಕೊಳ್ಳಲು ಇಲಾಖಾ / ಅನುಷ್ಠಾನ ವಿಮಾ ಸಂಸ್ಥೆ ವತಿಯಿಂದ ಕ್ರಮಕೈಗೊಂಡು ಅರ್ಹ ಫಲಾನುಭವಿಗಳಿಗೆ ಬೆಳೆ ವಿಮೆ ಪಾವತಿ ಮಾಡಲಾಗುತ್ತಿದೆ.<br><br>ಹೀಗಾಗಿ ರೈತರಿಗೆ ಅನ್ಯಾಯವಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |
| ಆ) | ಸದರಿ ಸಾಲಿನಲ್ಲಿ ಎಷ್ಟು ರೈತರು ಯೋಜನೆಗೆ ನೋಂದಾಯಿಸಿ ಕೊಂಡಿದ್ದರು ಮತ್ತು ಎಷ್ಟು ರೈತರಿಗೆ ಪರಿಹಾರ ಮೊತ್ತ ಪಾವತಿಸಲಾಗಿದೆ: ಪರಿಹಾರ ಪಾವತಿಸಲು ಬಾಕಿ ಇದ್ದಲ್ಲಿ ಯಾವ ಕಾಲಮಿತಿಯೊಳಗೆ ಪಾವತಿಸಲಾಗುವುದು: (ಜಿಲ್ಲಾವಾರು ಮಾಹಿತಿ ನೀಡುವುದು): | ಸದರಿ ಸಾಲಿನಲ್ಲಿ 7,51,924 ರೈತರು ಈ ಯೋಜನೆಯಡಿ ಅರ್ಜಿಗಳನ್ನು ನೋಂದಾಯಿಸಿಕೊಂಡಿದ್ದು, ಇದರಲ್ಲಿ 7,45,433 ರೈತರು ಪಾವತಿಗೆ ಅರ್ಹರಿದ್ದು ಈವರೆವಿಗೆ 5,98,303 ರೈತರಿಗೆ ಪರಿಹಾರ ಮೊತ್ತ ಪಾವತಿಸಲಾಗಿದೆ.<br><br>ಮೇಲೆ 'ಅ' ಉತ್ತರದಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಬಾಕಿ ಇರುವಂತಹ ಅರ್ಜಿಗಳನ್ನು ಸಹ ವಿಲೇವಾರಿ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ.<br><br>ಜಿಲ್ಲಾವಾರು ಮಾಹಿತಿ ಈ ಕೆಳಗಿನಂತಿದೆ:- |

| ಕ್ರ.ಸಂ | ಜಿಲ್ಲೆ | ಬಾಕಿ |
|---|---|---|
| 1. | ಗದಗ | 5 |
| 2. | ಬಳ್ಳಾರಿ | 163 |
| 3. | ಯಾದಗಿರಿ | 18 |
| 4. | ಬೆಂಗಳೂರು ಗ್ರಾಮಾಂತರ | 1055 |
| 5. | ವಿಜಯನಗರ | 46 |

| | | |
|---|---|---|
| 6. | ಬೀದರ್ | 266 |
| 7. | ಚಾಮರಾಜನಗರ | 12 |
| 8. | ಬೆಂಗಳೂರು ನಗರ | 12 |
| 9. | ಕೋಲಾರ | 64 |
| 10. | ಚಿತ್ರದುರ್ಗ | 5584 |
| 11. | ಹಾಸನ | 120 |
| 12. | ಚಿಕ್ಕಬಳ್ಳಾಪುರ | 33 |
| 13. | ರಾಮನಗರ | 105 |
| 14. | ತುಮಕೂರು | 282 |
| 15. | ದಾವಣಗೆರೆ | 247 |
| 16. | ಕೊಪ್ಪಳ | 249 |
| 17. | ಕಲಬುರಗಿ | 304 |
| 18. | ಕೊಡಗು | 5637 |
| 19. | ಉಡುಪಿ | 382 |
| 20. | ಧಾರವಾಡ | 349 |
| 21. | ಮಂಡ್ಯ | 11 |
| 22. | ಮೈಸೂರು | 12 |
| 23. | ರಾಯಚೂರು | 176 |
| 24. | ಬೆಳಗಾವಿ | 343 |
| 25. | ಶಿವಮೊಗ್ಗ | 1414 |
| 26. | ಹಾವೇರಿ | 1384 |
| 27. | ಚಿಕ್ಕಮಗಳೂರು | 3138 |
| 28. | ಉತ್ತರ ಕನ್ನಡ | 90245 |
| 29. | ಬಾಗಲಕೋಟೆ | 1000 |
| 30. | ವಿಜಯಪುರ | 1319 |
| 31. | ದಕ್ಷಿಣ ಕನ್ನಡ | 33155 |
| | **ಒಟ್ಟು** | **147130** |

ಇ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಹವಾಮಾನ ದತ್ತಾಂಶ ಆಧಾರದಲ್ಲಿ ಬೆಳೆ ಹಾನಿ ನಿರ್ಧಾರ ಮಾಡುವ ವೇಳೆ ಮಳೆ ಮಾಪನಗಳ ತಾಂತ್ರಿಕ ದೋಷಗಳು, ಅಸಮರ್ಪಕ ಅಳತೆ ವಿಧಾನಗಳಿಂದ ರೈತರಿಗೆ ಕಡಿಮೆ ಪರಿಹಾರ ನೀಡಿರುವ ಬಗ್ಗೆ ರೈತರು ಪ್ರತಿಭಟಿಸಿ ಸಂಬಂಧಿಸಿದ ಅಧಿಕಾರಿಗಳಿಗೆ ದೂರು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ದೂರುಗಳು ಬಂದಿವೆಯೇ; (ತಾಲ್ಲೂಕುವಾರು ಮಾಹಿತಿ ನೀಡುವುದು):

ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರ ಒಟ್ಟು 10 ದೂರುಗಳು ಬಂದಿರುತ್ತವೆ.

ತಾಲ್ಲೂಕುವಾರು ಮಾಹಿತಿ ಈ ಕೆಳಗಿನಂತಿದೆ:-

| ಕ್ರ. ಸಂ | ತಾಲ್ಲೂಕು | ದೂರುಗಳ ಸಂಖ್ಯೆ |
|---|---|---|
| 1 | ಬಂಟ್ವಾಳ | 2 |
| 2 | ಪುತ್ತೂರು | 7 |
| 3 | ಸುಳ್ಯ | 1 |
| | **ಒಟ್ಟು** | **10** |

ಈ) ಕಳೆದ ಸಾಲಿನಲ್ಲಿ ಎಷ್ಟು ರೈತರು ಪರಿಹಾರ ಮೊತ್ತದ ಬಗ್ಗೆ ಆಕ್ಷೇಪಣೆ ಸಲ್ಲಿಸಿದ್ದಾರೆ: ಆಕ್ಷೇಪಣೆಗಳ ನಿವಾರಣೆ ಯಾವ ಹಂತದಲ್ಲಿದೆ:

ಈ ಪೈಕಿ 5 ದೂರುಗಳ ನಿವಾರಣೆ ಮಾಡಲಾಗಿದ್ದು, ಬಾಕಿ 5 ದೂರುಗಳಿಗೆ ಕ್ರಮಕೈಗೊಳ್ಳಲಾಗುತ್ತಿದೆ.

ಉ) ಹವಾಮಾನ ಮಾಪನ ಕೇಂದ್ರಗಳ ನಿರ್ವಹಣೆ, ಅಪೂರ್ಣತೆ ಅಥವಾ ದತ್ತಾಂಶದ ವ್ಯತ್ಯಾಸದಿಂದ ಉಂಟಾದ ಸಮಸ್ಯೆಯನ್ನು

ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯಡಿ ಪರಿಹಾರ ಮೌಲ್ಯಮಾಪನಕ್ಕಾಗಿ ಬಳಸಲಾಗುವ ಹವಾಮಾನ ದತ್ತಾಂಶವನ್ನು ವೈಜ್ಞಾನಿಕವಾಗಿ ಸ್ಥಾಪಿಸಲಾದ ವಿಮಾ ಘಟಕವಾರು ಅಧಿಸೂಚಿತ

| | | |
|---|---|---|
| | ಸರಿಪಡಿಸಲು ಮತ್ತು ರೈತರಿಗೆ ಸಮರ್ಪಕ ಹಾಗೂ ನ್ಯಾಯಸಮ್ಮತ ಪರಿಹಾರ ದೊರಕುವಂತೆ ಮರುಪರಿಶೀಲನೆ ನಡೆಸುವ ಹಾಗೂ ಅಗತ್ಯವಿದ್ದಲ್ಲಿ ಹೆಚ್ಚುವರಿ ಪರಿಹಾರ ಬಿಡುಗಡೆ ಮಾಡುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ: ಮುಂದಿನ ವರ್ಷಗಳಲ್ಲಿ ಇಂತಹ ಅನ್ಯಾಯ ಮರುಕಳಿಸುವುದನ್ನು ತಡೆಯಲು ಸರ್ಕಾರ ಕ್ರಮ ವಹಿಸುವುದೇ? | ಸ್ವಯಂಚಾಲಿತ ಹವಾಮಾನ ಕೇಂದ್ರಗಳು (Automatic Weather Stations - AWS) ಮತ್ತು ಮಳೆಮಾಪಕ ಕೇಂದ್ರ (Rain Gauge - RG)ಗಳ ಜಾಲದ ಮೂಲಕ ಸಂಗ್ರಹಿಸಿ, ಪರಿಶೀಲಿಸಿ Karnataka State Natural Disaster Monitoring Centre (KSNDMC) ಸಂಸ್ಥೆಯು ಒದಗಿಸುತ್ತದೆ. ಈ ಕೇಂದ್ರಗಳಿಂದ ಪಡೆದ ಹವಾಮಾನ ಅಂಶಗಳ ದತ್ತಾಂಶದ ಬಳಕೆಯೊಂದಿಗೆ ಟರ್ಮ್ ಶೀಟ್ ನಲ್ಲಿ ನಿಗದಿಪಡಿಸಲಾದ ರಿಸ್ಕ್ ಅವಧಿಗೆ ಅನುಗುಣವಾಗಿ ಸಂರಕ್ಷಣೆ ತಂತ್ರಾಂಶದ ಮೂಲಕ ವಿಮಾ ಪರಿಹಾರವನ್ನು ವಿದ್ಯುನ್ಮಾನವಾಗಿ ಲೆಕ್ಕಾಚಾರ ಮಾಡಲಾಗುತ್ತದೆ. ಈ ಅನ್ವಯ ಸಂಬಂಧಿತ ವಿಮಾ ಕಂಪನಿಯ ಮೂಲಕ ಪರಿಹಾರ ಮೊತ್ತವನ್ನು ಪಾವತಿಸಲಾಗುತ್ತಿದೆ. ಟರ್ಮ್ ಶೀಟ್ ನಲ್ಲಿ ನಿಗದಿಪಡಿಸಲಾದ ರಿಸ್ಕ್ ಅವಧಿಗೆ ಸಂಬಂಧಿಸಿದ ಅಂತಿಮ ಹಾಗೂ ಪರಿಶೀಲಿತ ಹವಾಮಾನ ದತ್ತಾಂಶದ ಆಧಾರದ ಮೇಲೆ ಪರಿಹಾರ ಮೌಲ್ಯಮಾಪನ ಮಾಡಲಾಗುತ್ತಿದೆ. |

ಸಂಖ್ಯೆ: HORTI 96 HGM 2026

(ಎಸ್. ಎಸ್. ಮಲ್ಲಿಕಾರ್ಜುನ್)
ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು